ಎ) ಹೌದು.

ಬಿ) ಒಟ್ಟು 43,305.58 ಹೆಕ್ಟೇರ್ ಅರಣ್ಯ ಭೂಮಿ ಅತಿಕ್ರಮಣವಾಗಿದೆ ಎಂದು ಅಂದಾಜು ಮಾಡಲಾಗಿದೆ.

ಸಿ) ದಿನಾಂಕ 27–4–1978ರ ಹಿಂದೆ ಅತಿಕ್ರಮಣ ಮಾಡಿದ್ದಲ್ಲಿ ಅಂತಹ ಅತಿಕ್ರಮಣದ ಅರಣ್ಯ ಭೂಮಿಯನ್ನು ಅರಣ್ಯ ಸಂರಕ್ಷಣೆ ಕಾಯಿದೆ 1980ರ ಅನ್ವಯ ಭಾರತ ಸರ್ಕಾರದ ಅನುಮತಿಯನ್ನು ಪಡೆದು ಸಕ್ರಮಗೊಳಿಸಲು ಉದ್ದೇಶಿಸಲಾಗಿದೆ.

ಡಿ) ಹೌದು.

ಇ) ಇಲ್ಲಾ.

ಏಡ್ಸ್ ರೋಗದ ಸೋಂಕು ತಡೆಗಟ್ಟಲು ರಕ್ತ ಪರೀಕ್ಷೆ

283 (1017) ಜಿ.ಪುಟ್ಟಸ್ವಾಮಿ ಗೌಡ (ಹೊಳೇ ನರಸಿಪುರ):-

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಎ) ಏಡ್ಸ್ ರೋಗದ ಸೋಂಕು ಹರಡುವುದನ್ನು ತಡೆಗಟ್ಟಲು ರಕ್ತಪರೀಕ್ಷೆ ಮಾಡುವ ವ್ಯವಸ್ಥೆಯನ್ನು ಪರಿಶೋಧಿಸುವ ಕಾರ್ಯಕ್ರಮವನ್ನು ಸರ್ಕಾರ ಹಾಕಿಸಿಕೊಂಡಿದೆಯೇ ?

ಬಿ) ಇಲ್ಲದಿದ್ದರೆ ಈ ತರಹದ ಕಾರ್ಯಕ್ರಮವನ್ನು ಹಾಕಿಕೊಳ್ಳಲು ಸರ್ಕಾರಿ ಕ್ರಮ ತೆಗೆದುಕೊಳ್ಳುತ್ತದೆಯೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಎ) ರಕ್ತ ಪರೀಕ್ಷೆಯ ವ್ಯವಸ್ಥೆಯನ್ನು ಪರಿಶೋಧಿಸುವ ವಿಷಯವು ಒಂದು ಹೊಸ ಸಂಗತಿಯಾಗಿದ್ದು ಇದನ್ನು ಸರ್ಕಾರ ಪರಿಶೀಲಿಸುತ್ತಿದೆ. ಪ್ರಸ್ತುತ ಆ ರೀತಿಯ ಪರಿಶೋಧನೆ ಪ್ರಾರಂಭಿಸಿಲ್ಲ.

ಬಿ) ಹೌದು. ಸರ್ಕಾರ ಈ ತರಹದ ಕಾರ್ಯಕ್ರಮ ಹಾಕಿಕೊಳ್ಳಲು ಬಯಸುತ್ತದೆ.

ಭದ್ರಾವತಿ ತಾಲ್ಲೂಕಿನಲ್ಲಿ ಬಿದ್ದ ಬಾರಿ ಮಳೆಯಿಂದಾಗಿ ಮೀನುಗಾರರ ಬಲೆಗಳು ಕೊಚ್ಚಿ ಹೋಗಿ ಪರಿಹಾರಕ್ಕೆ ಒತ್ತಾಯ

285 (1026) ಶ್ರೀ ಕರಿಯಣ್ಣ (ಹೊಳೇಹೊನ್ನೂರು):-

ಮೀನುಗಾರಿಕೆ ಮತ್ತು ಬಂದರುಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಎ) ದಿನಾಂಕ 16,17ರ ನವೆಂಬರ್, 1992ರಂದು ಬಿದ್ದ ಬಾರಿ ಮಳೆಯಿಂದ ಶಿವಮೊಗ್ಗ ಜಿಲ್ಲೆಯ ಭದ್ರಾವತಿ ತಾಲ್ಲೂಕಿನ 15 ಪ್ರಮುಖವಾದ ಕೆರೆಗಳು ಒಡೆದು ಮೀನು ಸಾಕಾಣಿದಾರರ ಮೀನುಗಳು ಹಾಗೂ ನದಿಯ ಬುಡದಲ್ಲಿದ್ದ ಮೀನುಗಾರರ ಬಲೆಗಳು ಕೊಚ್ಚಿ ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಿ) ಹಾಗಿದ್ದಲ್ಲಿ, ಈ ಬಡ ಮೀನುಗಾರರಿಗೆ ಸರ್ಕಾರವು ಪರಿಹಾರವನ್ನು ನೀಡಿದೆಯೇ ?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರುಗಳು ರಾಜ್ಯ ಸಚಿವರು):–